ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರಃ 1202-2013

ಚಾಸಾ ಃ 1 ಪ್ರಾಸಾ ಃ1

ದಿನಾಂಕಃ 29-10-2018

| | | |
|---|---|---|
| ವಾಗ್ಮೂಲದವರ ಹೆಸರು | ಃ | ಎನ್ ಜಗದೀಶ |
| ಗಂಡ/ತಂದೆಯ ಹೆಸರು | ಃ | ನಾರಾಯಣ ಮೋಗವೀರ |
| ವಯಸ್ಸು | ಃ | 37 ವರ್ಷ |
| ಉದ್ಯೋಗ | ಃ | ಗಾರೆ ಕೆಲಸ |
| ವಾಸ ಸ್ಥಳ | ಃ | ಹೊಸ ನಗರ ತಾಲೂಕು , ಮಾರುತಿ ಪುರ ಗ್ರಾಮ, ಶಿವಮೊಗ್ಗ ಜಿಲ್ಲೆ. |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದಃ

ದಿನಾಂಕ 05-01-2013 ರಂದು ರಾತ್ರಿ ಸುಮಾರು 08-00 ಗಂಟೆಯ ಸಮಯದಲ್ಲಿ ಕಾಳವರದ ಕಟ್ಕೇರಿ ಹರಕೆ ಮಹಾಲಿಂಗೇಶ್ವರ ದೇವಸ್ಥಾನ ಬಳಿ ನನ್ನ ತಮ್ಮನಾದ ಉಮೇಶರವರು ಚಾಸಾ2 ರವರನ್ನು ಸಹಸವಾರನನ್ನಾಗಿ ದ್ವಿಚಕ್ರ ವಾಹನ ಕುಳ್ಳಿರಿಸಿಕೊಂಡು ಹೋಗುತ್ತಿದ್ದಾಗ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. ಆ ಕಾಲಕ್ಕೆ ನಾನು ಕಾಳವರದಲ್ಲಿ ಬಾಡಿಗೆ ಮನೆಯಲ್ಲಿ ವಾಸ ಇದ್ದೆ. ಅಪಘಾತ ಆದ ಕೂಡಲೇ ಅಲ್ಲಿ ಸೇರಿದ ಜನರು ನನ್ನ ಮನೆಯ ಮಾಲಕರಿಗೆ ತಿಳಿಸಿದ್ದು ಅವರು ನನಗೆ ತಿಳಿಸಿರುತ್ತಾರೆ. ವಿಷಯ ತಿಳಿದ ಕೂಡಲೇ ನಾನು ಹೊರಟು ಅಪಘಾತದ ನಡೆದ ಸುಮಾರು 20 ನಿಮಿಷಗಳ ಒಳಗಾಗಿ ಆ ಸ್ಥಳಕ್ಕೆ ತಲುಪಿದ್ದೇನೆ. ಅಂದು ನನ್ನ ತಮ್ಮ ಕಾಳವರದಿಂದ ಬೀಜಾಡಿಗೆ ಮೋಟಾರು ವಾಹನದಲ್ಲಿ ಹೋಗುತ್ತಿದ್ದಾಗ ಕೋಟೇಶ್ವರದಿಂದ ಕಾಳವರದ ಕಡೆಗೆ ಟಾಟಾ 407 ಟೆಂಪೋ ವೇಗವಾಗಿ ಬಂದು ನನ್ನ ತಮ್ಮನ ದ್ವಿಚಕ್ರ ವಾಹನಕ್ಕೆ ಮುಖಾಮುಖಿ ಡಿಕ್ಕಿಯಾದ ಪರಿಣಾಮ ನನ್ನ ತಮ್ಮ ಸ್ಥಳದಲ್ಲಿಯೇ ಮೃತಪಟ್ಟಿದ್ದರು. ನಾನು ಸ್ಥಳಕ್ಕೆ ಹೋಗುವ ಕಾಲಕ್ಕೆ ನನ್ನ ತಮ್ಮನ ಮೃತ ದೇಹ ಸ್ಥಳದಲ್ಲಿಯೇ ಇತ್ತು. ನಾನು ಕೂಡಲೇ ಆ್ಯಂಬುಲೆನ್ಸ್‌ನವರಿಗೆ ಕರೆ ಮಾಡಿ

ನನ್ನ ತಮ್ಮನನ್ನು ಕುಂದಾಪುರದ ಚಿನ್ಮಯಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು ಅಲ್ಲಿನ ವೈದ್ಯರು ಪರೀಕ್ಷೆ ಮಾಡಿ ನನ್ನ ತಮ್ಮ ಮೃತಪಟ್ಟಿರುವುದು ಖಚಿತಪಡಿಸಿದರು. ಅಪಘಾತಪಡಿಸಿದ ಟಾಟಾ 407 ವಾಹನದ ನೊಂದಣಿ ಸಂಖ್ಯೆ ಕೆಎ20ಸಿ4779 ಆಗಿತ್ತು . ನನ್ನ ತಮ್ಮ ಚಾಲನೆ ಮಾಡುತ್ತಿದ್ದ ದ್ವಿಚಕ್ರ ವಾಹನದ ನೊಂದಣಿ ಸಂಖ್ಯೆ ಕೆಎ20ಇಸಿ0672 ಆಗಿತ್ತು. ಅಪಘಾತಪಡಿಸಿದ ವಾಹನದ ಚಾಲಕ ಹುಸೇನ್ ಖಾನ್ ಎಂದು ತಿಳಿದುಕೊಂಡಿದ್ದೇನೆ. ಆ ವ್ಯಕ್ತಿ ಸ್ಥಳದಲ್ಲಿ ಆಗ ಇರಲಿಲ್ಲ. ಅವರನ್ನು ನಾನು ಸ್ಥಳದಲ್ಲಿ ನೋಡಿಲ್ಲ. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಆ ಎರಡೂ ವಾಹನಗಳು ಸ್ಥಳದಲ್ಲಿದ್ದವು. ದ್ವಿಚಕ್ರ ವಾಹನ ರಸ್ತೆಯ ಎಡ ಭಾಗದಲ್ಲಿ ಬಿದ್ದಿದ್ದು , ಟೆಂಪೋವು ಅಲ್ಲಿಯೇ ಸ್ವಲ್ಪ ಮುಂದೆ ರಸ್ತೆಯ ಎಡ ಬದಿಯಲ್ಲಿ ನಿಂತಿತ್ತು. ನನ್ನ ತಮ್ಮನ ಶವವನ್ನು ಶವಗಾರಕ್ಕೆ ಸಾಗಿಸಿ ಬಳಿಕ ಪೋಲಿಸ್ ಠಾಣೆಗೆ ನಾನು ಅಪಘಾತದ ಬಗ್ಗೆ ನೀಡಿದ ಮಾಹಿತಿಯ ಮೇರೆಗೆ ಅವರು ಬರವಣಿಗೆ ಮಾಡಿಕೊಂಡು ನನ್ನ ಸಹಿಯನ್ನು ಅದಕ್ಕೆ ಪಡೆದಿದ್ದಾರೆ . ಆ ದಾಖಲೆಯನ್ನು ಸಾಕ್ಷಿಯು ಗುರುತಿಸಿದ್ದು ಅದನ್ನು ನಿಪಿ1 ಎಂದು ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಅಂದು ನಾನು ಅಪಘಾತದ ಸ್ಥಳದಲ್ಲಿ ನೋಡಿಲ್ಲ. ಸಾಕ್ಷಿಯು ಸದರಿ ದ್ವಿಚಕ್ರ ವಾಹನ ಮತ್ತು ಟೆಂಪೋದ ಛಾಯಚಿತ್ರಗಳನ್ನು ಗುರುತಿಸಿದ್ದು ಅವುಗಳನ್ನು ನಿಪಿ2 ಮತ್ತು 3 ಎಂದು ಅನುಕ್ರಮವಾಗಿ ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜೆ.ಪಿ.ಎಸ್.ರವರಿಂದಃ**

ನಾನು ಮತ್ತು ನನ್ನ ತಮ್ಮ ಕಾಳವರದಲ್ಲಿ ಒಟ್ಟಿಗೆ ವಾಸ ಇದ್ದೆವು. ಅಂದು ನನ್ನ ತಮ್ಮ ಬೀಜಾಡಿಯಲ್ಲಿರುವ ನನ್ನ ಇನ್ನೊಬ್ಬ ತಮ್ಮನಾದ ರಾಘವೇಂದ್ರರವರ ಹೆಂಡತಿಯ ಮನೆಗೆ ಹೋಗುತ್ತಿದ್ದರು.ನನ್ನ ಮೃತ ತಮ್ಮನು ಅವರ ಮನೆಗೆ ಅಂದು ಹೋಗುತ್ತಿದ್ದರು ಎಂದು ನಾನು ಪೋಲಿಸರ ಬಳಿ ಹೇಳಿದ್ದೇನೆ. ಅದನ್ನು ಪೋಲಿಸರು ಬರೆದುಕೊಂಡಿದ್ದಾರೆ. ಆ ವಿಚಾರವನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನಾನು ಸದರಿ ವಿಚಾರವನ್ನು ಇಂದು

ಪ್ರಥಮ ಬಾರಿ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನವು ನನ್ನ ತಮ್ಮನ ಮಾಲೀಕತ್ವಕ್ಕೆ ಒಳಪಟ್ಟಿತ್ತು. ಆ ವಾಹನದ ದಾಖಲೆಗಳು ನನ್ನ ತಮ್ಮನಾದ ಉಮೇಶರವರ ಹೆಸರಿನಲ್ಲಿಯೇ ಇದ್ದವು. ಸದರಿ ವಾಹನವನ್ನು ಅವರ ಹೆಂಡತಿಯಾದ ಲಕ್ಷ್ಮೀರವರು ಪೋಲಿಸ್ ಠಾಣೆಯಿಂದ ದಾಖಲೆಗಳಿಗೆ ಸಹಿ ಮಾಡಿ ಬಿಡಿಸಿಕೊಂಡಿದ್ದಾರೆ. ಆ ಕಾಲಕ್ಕೆ ಅವರೊಂದಿಗೆ ಪೋಲಿಸ್ ಠಾಣೆಗೆ ಚಾಸಾ15 ರವರು ಹೋಗಿದ್ದರು.

ಅಪಘಾತದ ವಿಚಾರವು ನನಗೆ ರಾತ್ರಿ 08-10 ಗಂಟೆಗೆ ಕುಮಾರ ದೇವಾಡಿಗ ಎಂಬುವವರಿಂದ ದೂರವಾಣಿ ಮೂಲಕ ತಿಳಿಯಿತು. ತಕ್ಷೀರು ಸ್ಥಳದಲ್ಲಿ ರಸ್ತೆಯು ಯಾವ ದಿಕ್ಕಿನಿಂದ ಯಾವ ದಿಕ್ಕಿನ ಕಡೆಗೆ ಇದೆ ಎಂದು ನನಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲ. ತಕ್ಷೀರು ಸ್ಥಳವು ಒಂದು ವಾಹನ ಮಾತ್ರ ಹೋಗಬಹುದಾದ ಅಗಲವಾದ ರಸ್ತೆ ಎಂದರೆ ಸರಿ . ತಕ್ಷೀರು ಸ್ಥಳದ ಸಮೀಪ ಡಾಂಬರು ರಸ್ತೆಯಿಂದ ಅಕ್ಕಪಕ್ಕದ ಮಣ್ಣಿನ ರಸ್ತೆಗೆ ಎತ್ತರ ತಗ್ಗು ಇತ್ತು ಎಂದರೆ ಸರಿಯಲ್ಲ. ಅಪಘಾತವು ಟಾರು ರಸ್ತೆಯಲ್ಲಿಯೇ ನಡೆದಿದೆ. ಅಪಘಾತವು ರಸ್ತೆಯ ಎಡ ಭಾಗದ ಅಂಚಿನಲ್ಲಿ ಆಗಿದ್ದು, ಸದರಿ ಅಂಚಿನಿಂದ ಎಷ್ಟು ದೂರದಲ್ಲಿ ಅಪಘಾತ ಅಗಿದೆ ಎಂದು ನನಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲ. ಟೆಂಪೋವು ಅಪಘಾತದ ಸ್ಥಳದಿಂದ ಸುಮಾರು 200 ರಿಂದ 300 ಅಡಿಗಳ ಅಂತರದಲ್ಲಿ ನಿಂತಿತ್ತು. ಬೈಕು ಬಿದ್ದಿದ್ದ ಬದಿಯಲ್ಲಿಯೇ ಆ ಟೆಂಪೋ ಕೂಡ ಮುಂದೆ ನಿಂತಿತ್ತು. ಅಪಘಾತದ ಸ್ಥಳದಲ್ಲಿ ಡಾಂಬರು ರಸ್ತೆ ಹಾಳಾಗಿತ್ತು ಎಂದರೆ ನನಗೆ ಈಗ ಹೇಳಲು ಸಾಧ್ಯವಿಲ್ಲ.

ಪೋಲಿಸ್ ಠಾಣೆಯಲ್ಲಿ ಎಷ್ಟು ಸಹಿಗಳನ್ನು ಮಾಡಿದ್ದೇನೆ ಎಂದು ನನಗೆ ನೆನಪಿಲ್ಲ. ನಾನು ಸಹಿ ಮಾಡಿದ ದಾಖಲೆಯಲ್ಲಿ ಬರೆದ ವಿಚಾರಗಳನ್ನು ತುಂಬಾ ಸಮಯ ಆಗಿರುವುದರಿಂದ ನನಗೆ ಈಗ ಹೇಳಲು ಸಾಧ್ಯವಿಲ್ಲ. ನಾನು ಪೋಲಿಸ್ ಠಾಣೆಯಲ್ಲಿ ಒಂದು ದಿನ ಮಾತ್ರ ಸಹಿ ಮಾಡಿದ್ದೇನೆ. ಆ ಬಳಿಕ ನನ್ನನ್ನು ಪೋಲಿಸರು ಕರೆಸಿ ವಿಚಾರಿಸಿಲ್ಲ. ಸಾಕ್ಷಿ ಮುಂದುವರಿದು ನನ್ನ ಅಣ್ಣನಾದ ಚಾಸಾ15 ರವರನ್ನು ಕರೆಸಿ ವಿಚಾರಿಸಿದ್ದಾರೆ ಎನ್ನುತ್ತಾರೆ. ನಾನು ಪೋಲಿಸ್ ಠಾಣೆಗೆ ಲಿಖಿತವಾದ ದೂರನ್ನು

ತೆಗೆದುಕೊಂಡು ಹೋಗಿ ನೀಡಿಲ್ಲ. ಅಪಘಾತದ ಬಗ್ಗೆ ನಾನು ಬೇರೆಯವರಿಂದ ಕೇಳಿ ತಿಳಿದು ಹೇಳುತ್ತಿದ್ದೇನೆ ಎಂದರೆ ಸರಿ . ನಾನು ಅಪಘಾತವನ್ನು ನೋಡಿಲ್ಲ. ನಾನು ಹೇಳುವ ರೀತಿಯಲ್ಲಿ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ.

ನನ್ನ ಮೃತ ತಮ್ಮನ ಬಳಿ ಚಾಲನಾ ಪರವಾನಿಗೆ ಇತ್ತು. ಆತನು ತಿರುಪತಿಯಲ್ಲಿ ಇದ್ದು ಅಲ್ಲಿಯೇ ಅದನ್ನು ಮಾಡಿಸಿರಬಹುದು. ಅಪಘಾತ ನಡೆಯುವ ಮೊದಲು ಮೂರು ವರ್ಷ ಅವರು ತಿರುಪತಿಯಲ್ಲಿದ್ದರು. ಬಳಿಕ ಊರಿಗೆ ಬಂದು ಸುಮಾರು 3 ವರ್ಷ ಇದ್ದರು. ಅಪಘಾತ ನಡೆಯುವ ಕಾಲಕ್ಕೆ ಸುಮಾರು 32 ವರ್ಷ ವಯಸ್ಸಾಗಿತ್ತು. ನನ್ನ ಮೃತ ತಮ್ಮನ ಬಳಿ ಚಾಲನಾ ಪರವಾನಿಗೆ ಇರಲಿಲ್ಲ ಮತ್ತು ಅವರಿಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ಮದ್ಯಪಾನ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅಲ್ಪಸ್ವಲ್ಪ ಮಾಡುತ್ತಿದ್ದರು ಎನ್ನುತ್ತಾರೆ. ಅಂದು ನನ್ನತಮ್ಮ ಮದ್ಯಪಾನ ಮಾಡಿ ಅಜಾಗರೂಕತೆಯಿಂದ ದ್ವಿಚಕ್ರ ವಾಹನ ಚಾಲನೆ ಮಾಡಿ ಅಪಘಾತ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ಅಂದು ಹುಸೇನ್ ಖಾನ್‌ರವರು ಟೆಂಪೋದ ಚಾಲಕ ಆಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮನ ಮರಣದ ಕುರಿತು ವಿಮಾ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿ . ಅದಕ್ಕೆ ಪೂರಕವಾಗಿ ಈ ದಿನ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.